ಹಿಂಡಲಗಾ ಕೇಂದ್ರ ಬಂದೀಖಾನೆಗೆ ಆಹಾರ ಸಾಮಗ್ರಿಗಳ ಖರೀದಿ

253 - ಶ್ರೀ ಕೆ.ಸಿ. ಮೊಡಗೇಕರ ದೇಸಾಯಿ (ಹಿರೇಬಾಗೇವಾಡಿ) : ಮಾನ್ಯ ಬಂದೀಖಾನೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಹಿಂಡಲಗ ಕೇಂದ್ರ ಕಾರಾಗೃಹ ಬೆಳಗಾಂ ಇಲ್ಲಿಯ ಖೈದಿಗಳಿಗೆ ಆಹಾರ ಪದಾರ್ಥಗಳನ್ನು ಖಾಸಗಿಯವರಿಂದ ಕೊಂಡು ಸರಬರಾಜು ಮಾಡುತ್ತಿರುವುದು ನಿಜವೇ?

ಆ) ಹಾಗಿದ್ದರೆ, ಆಹಾರ ಪದಾರ್ಥಗಳನ್ನು ಬಹಿರಂಗ ಟೆಂಡರ್ ಮೂಲಕ ಕೊಳ್ಳದಿರಲು ಕಾರಣವೇನು?

(ವಿವರವಾದ ಕಾರಣವನ್ನು ನೀಡುವುದು)

ಡಾ ॥ ಆರ್.ಬಿ. ಚೌಧುರಿ (ಕಾರಾಗೃಹಗಳ ರಾಜ್ಯ ಸಚಿವರು) :

ಅ) ಇಲ್ಲ

ಆ) ಉದ್ಭವಿಸುವುದಿಲ್ಲ.

Sri K.C. Modagekar Desai : Mr. Speaker Sir, To my question (a) the Hon'ble Minister has given reply as 'No'. To my question (b) he has said 'Does not arise'. As an MLA, I once visited the Prison along with other persons and found that the food supplied is not fit for eating. It is clear that there is a nexus between the Jail authorities and the Suppliers. Same thing with the milk also. What action will you take to supply standard quality of food and unadulterated food articles?

ಡಾ॥ ಆರ್.ಬಿ. ಚೌಧರಿ : ಮಾನ್ಯ ಅಧ್ಯಕ್ಷರೇ, 19-9-87ರ ಸರ್ಕಾರಿ ಆದೇಶದ ಪ್ರಕಾರ ಈ ಜೈಲುಗಳಿಗೆ ಬೇಕಾದ ಆಹಾರಪದಾರ್ಥಗಳನ್ನು ಖರೀದಿಸಲು ಕನ್ಸೂಮರ್ಸ್ ಕೋ-ಆಪರೇಟಿವ್ ಸ್ಟೋರ್ಸ್ ಡಿಸ್ಟ್ರಿಕ್ಟ್ ಸೆಂಟ್ರಲ್ ಕೋ-ಆಪರೇಟೀವ್ ಸ್ಟೋರ್ಸ್ ಅಥವಾ ಕರ್ನಾಟಕ ಕನ್ಸೂಮರ್ಸ್ ಕೋ-ಆಪರೇಟಿವ್ ಫೆಡರೇಶನ್ ಅಥವಾ ಜನತಾ ಬಜಾರುಗಳ ಮೂಲಕವೇ ಖರೀದಿ ಮಾಡಬೇಕು ಎನ್ನುವ ನಿಯಮದ ಪ್ರಕಾರ ನಾವು ಸರಬರಾಜು ಮಾಡುತ್ತಿದ್ದೇವೆ. ಕಳಪೆ ಮಟ್ಟದ ಆಹಾರಪದಾರ್ಥಗಳನ್ನು ಸರಬರಾಜು ಮಾಡುತ್ತಿದ್ದಾರೆಂದು ಮಾನ್ಯ ಸದಸ್ಯರು ಆರೋಪ ಮಾಡುತ್ತಿದ್ದಾರೆ. ಅದರ ಬಗ್ಗೆ ನಾನು ವಿಚಾರ ಮಾಡಿ ಮುಂದಿನ ಕ್ರಮ ತೆಗೆದುಕೊಳ್ಳುತ್ತೇನೆ.

Sri K.C. Modgekar Desai : They are supplying sub-standard food. Therefore, what is the difficulty in calling for tenders in local newspapers to supply food articles to the Prison?

ಡಾ॥ ಆರ್.ಬಿ. ಚೌಧರಿ : ನಾನು ಈಗಾಗಲೇ ಹೇಳಿದ್ದೇನೆ. ನಾವು ಸರ್ಕಾರಿ ಆದೇಶದ ಪ್ರಕಾರ ಸರಬರಾಜು ಮಾಡುತ್ತಿದ್ದೇವೆ. ಅವರು ಸಬ್ ಸ್ಟ್ಯಾಂಡರ್ಡ್ ಎಂದು ಹೇಳುತ್ತಿದ್ದಾರೆ. ಆ ಬಗ್ಗೆ ನಾನು ವಿಚಾರ ಮಾಡುತ್ತೇನೆಂದು ಈ ಸಂದರ್ಭದಲ್ಲಿ ಮಾನ್ಯ ಸದಸ್ಯರಿಗೆ ತಮ್ಮ ಮೂಲಕ ಹೇಳುತ್ತೇನೆ.

ರಾಜ್ಯದಲ್ಲಿ ಒಣ ಭೂಮಿ ಅಭಿವೃದ್ಧಿ ಯೋಜನೆ

12 - ಶ್ರೀ ಎಸ್. ಶಫಿ ಅಹಮದ್ (ತುಮಕೂರು): ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ರಾಜ್ಯದಲ್ಲಿ ಡಿ.ಎಲ್.ಡಿ.ಬಿ. ಯೋಜನೆಗಳನ್ನು ಜಾರಿಗೊಳಿಸುತ್ತಿರುವ ಜಿಲ್ಲೆಗಳ ಸಂಖ್ಯೆ ಮತ್ತು ಹಾಗಿದ್ದಲ್ಲಿ ಮಾಡಲಾದ ಬಂಡವಾಳದ ಅಂದಾಜು ವೆಚ್ಚ

ಅ) ಈ ಯೋಜನೆಗಾಗಿ ರಾಜ್ಯ ಮತ್ತು ಕೇಂದ್ರ ಸರ್ಕಾರವು ಒದಗಿಸಿರುವ ಹಣ,

ಇ) ತುಮಕೂರು ಜಿಲ್ಲೆಯಲ್ಲಿ ತಾಲ್ಲೂಕುವಾರು ಮಾಡಲಾಗಿರುವ ಬಂಡವಾಳ.

ಶ್ರೀ ಹೆಚ್.ಎಂ. ರೇವಣ್ಣ (ಕೃಷಿ ಸಚಿವರು) :

ಅ) ರಾಜ್ಯದ 19 ಜಿಲ್ಲೆಗಳಲ್ಲಿ ಡಿ.ಎಲ್.ಡಿ.ಬಿ. ಯೋಜನೆಯು ಜಾರಿಯಲ್ಲಿದೆ. ಜಲಾನಯನ ಅಭಿವೃದ್ಧಿ ಕಾರ್ಯಕ್ರಮಕ್ಕಾಗಿ ಮಾಡಲಾದ ಅಂದಾಜು ವೆಚ್ಚವು 13,176.885 ಲಕ್ಷ ರೂ.ಗಳು ಇರುತ್ತದೆ.

ಆ) ಕೇಂದ್ರ ಸರ್ಕಾರವು (ಆರ್.ಎಲ್.ಐ.ಜಿ.ಸಿ., ಎನ್.ಆರ್.ಇ.ಪಿ., ಮುಂತಾದ ಯೋಜನೆಗಳಡಿಯಲ್ಲಿ) ಬಿಡುಗಡೆ ಮಾಡಿರುವ 4852.51 ಲಕ್ಷ ರೂ.ಗಳು. ರಾಜ್ಯ ಸರ್ಕಾರವು 3869.999 ಲಕ್ಷ ರೂ.ಗಳನ್ನು ಬಿಡುಗಡೆ ಮಾಡಿದೆ. ಹಾಗೂ ವಿಶ್ವ ಬ್ಯಾಂಕ್ ನೆರವಿನಿಂದ 3340.897 ಲಕ್ಷ ರೂ.ಗಳನ್ನು ಈ ಯೋಜನೆಯು ಜಾರಿಯಲ್ಲಿರುವ ದಿನಾಂಕದಿಂದ 1993-94ನೇ ಸಾಲಿನವರೆವಿಗೂ ಬಿಡುಗಡೆ ಮಾಡಲಾಗಿದೆ.

ಇ)ಡಿ.ಎಲ್.ಡಿ.ಬಿ. ಅಡಿಯಲ್ಲಿ ಜಾರಿಗೊಳಿಸುತ್ತಿರುವ ಕಾರ್ಯಕ್ರಮವು ಕ್ಷೇತ್ರ ಅಭಿವೃದ್ಧಿ ಕಾರ್ಯಕ್ರಮವಾಗಿದ್ದು, ಇದರಡಿಯಲ್ಲಿ ಒಂದಕ್ಕಿಂತ ಹೆಚ್ಚಿನ ತಾಲ್ಲೂಕುಗಳು ಒಳಪಡುತ್ತವೆ. ಆದಕಾರಣ ತಾಲ್ಲೂಕುವಾರು ಮಾಡಲಾಗಿರುವ ಬಂಡವಾಳದ ಮಾಹಿತಿಯು ದೊರೆಯುವುದಿಲ್ಲ. ಆದರೆ ಜಲಾನಯನವಾರು 1993-94ನೇ ಸಾಲಿನವರೆವಿಗೂ ತುಮಕೂರು ಜಿಲ್ಲೆಯಲ್ಲಿ ಮಾಡಲಾದ ಬಂಡವಾಳದ ವಿವರಗಳು ಕೆಳಕಂಡಂತಿವೆ.

(1) ಕಳ್ಳಂಬೆಳ್ಳಾ ಜಲಾನಯನ ತುಮಕೂರು ಜಿಲ್ಲೆಯ ತುಮಕೂರು, ಕೊರಟಗೆರೆ, ಗುಬ್ಬಿ ಮತ್ತು ಶಿರಾ ತಾಲ್ಲೂಕುಗಳು ಈ ಜಲಾನನಯಕ್ಕೆ ಸೇರಿದೆ. 520.317 (ಲಕ್ಷ ರೂ.ಗಳಲ್ಲಿ)

(2) ಕಲ್ಯಾಣಕೆರೆ ಮತ್ತು ಮಾವತ್ತೂರು ಕೆರೆ ಜಲಾನಯನ ಬೆಂಗಳೂರು (ಗ್ರಾಮಾಂತರ) ಜಿಲ್ಲೆಯ ಮಾಗಡಿ, ನೆಲಮಂಗಲ ಮತ್ತು ದೊಡ್ಡ ಬಳ್ಳಾಪುರ ತಾಲ್ಲೂಕುಗಳು ಹಾಗೂ ತುಮಕೂರು ಜಿಲ್ಲೆಯ ಕುಣಿಗಲ್, ಕೊರಟಗೆರೆ ಮತ್ತು ತುಮಕೂರು ತಾಲ್ಲೂಕುಗಳ ಜಲಾನಯನಕ್ಕೆ ಸೇರಿವೆ.1115.90 (ಲಕ್ಷ ರೂ.ಗಳಲ್ಲಿ)

ಶ್ರೀ ಎಸ್. ಶಫಿ ಅಹಮದ್ : ಮಾನ್ಯ ಅಧ್ಯಕ್ಷರೇ, ಮಾನ್ಯ ಸಚಿವರು ತಮ್ಮ ಉತ್ತರದಲ್ಲಿ ಕೇಂದ್ರ ಸರ್ಕರದಿಂದ ಮತ್ತು ರಾಜ್ಯ ಸರ್ಕಾರದಿಂದ 400 ಕೋಟಿ 852 ಲಕ್ಷ ರೂಪಾಯಿಗಳು ಒಟ್ಟು ಬಂತು. ರಾಜ್ಯ ಸರ್ಕಾರದಿಂದ 1993-94ರಲ್ಲಿ ಸುಮಾರಿದ 340ಕೋಟಿ ರೂಪಾಯಿಗಳು ಆರ್.ಎಲ್.ಇ.ಜಿ.ಪಿ. ಮತ್ತು ಎನ್.ಆರ್.ಇ.ಪಿ.ಯಲ್ಲಿ ಬಿಡುಗಡೆ ಆಗಿದೆ ಎಂದು ಹೇಳಿದ್ದಾರೆ. ಅದರಲ್ಲಿ ಕಳ್ಳಂಬೆಳ್ಳ ವಾಟರ್ ಷೆಡ್ಡಗಿಗೆ 520.31 ಲಕ್ಷ ರೂಪಾಯಿಗಳ ಬಿಡುಗಡೆ ಆಗಿದೆ ಎಂದು ಹೇಳಿದ್ದಾರೆ. ಕೇಂದ್ರ ಸರ್ಕಾರದಿಂದ ಕೊಟ್ಟಿರುವ ಹಣದಲ್ಲಿ ತುಮಕೂರು ಜಿಲ್ಲೆಗೆ ಸೆಂಟ್ರಲ್ ಸ್ಪಾನ್ಸರ್ಡ್‌ಸ್ಕೀಮ್ ಎಂದು ಒಂದು ಯೋಜನೆಯನ್ನು ಕಳುಹಿಸಿಕೊಟ್ಟಿದ್ದರು. ಅದರಲ್ಲಿ ಹಣ ಇನ್ನೂ ಬಿಡುಗಡೆ ಆಗಿಲ್ಲ. ಅದರ ಬಗ್ಗೆ ನಾನು ಪ್ರಶ್ನೆ ಕೇಳಿದ್ದೆ ಮತ್ತು ತಾಲ್ಲೂಕು ವೈಜ್ ಫಿಗರ್ಸ್ ಕೊಡಿ, ಎಷ್ಟು ಕೆಲಸ ಆಗಿದೆ ಎಂದು ಕೇಳಿದ್ದೆ. ಆದರೆ ಇದರಲ್ಲಿ ಜಿಲ್ಲಾ ವೈಜ್ ಉತ್ತರ ಕೊಟ್ಟಿದ್ದಾರೆ. ನಮ್ಮ ಕ್ಷೇತ್ರದಲ್ಲಿ ಎಷ್ಟು ಕೆಲಸ ಆಗಿದೆ ಎಂದು ವಿವರ ಕೊಟ್ಟರೆ ಒಳ್ಳೆಯದು. ಇವತ್ತು ಹೈದ್ರಾಬಾದ್ ಡೆವಲಪ್ಮೆಂಟ್ ಬೋರ್ಡ್ ಮತ್ತು ಮಲೆನಾಡು ಡೆವಲಪ್ಮೆಂಟ್ ಬೋರ್ಡ್ ಡೆವಲಪ್‌ಮೆಂಟ್ ಬೋರ್ಡ್ ಎಂದು ಮಾಡಿದ್ದೀರಿ. ನಮ್ಮ ಮುಖ್ಯ ಮಂತ್ರಿಗಳೂ ಸಹ ಬೆಂಗಳೂರು ರೂರಲ್, ತುಮಕೂರು, ಕೋಲಾರ - ಈ ಭಾಗಕ್ಕೆ ಥೈಲ್ಯಾಂಡ್ ಡೆವಲಪ್‌ಮೆಂಟ್ ಬೋರ್ಡ್ ಮಾಡುತ್ತೇವೆಂದು

ಆಶ್ವಾಸನೆ ಕೊಟ್ಟಿದ್ದರು. ಮಾಡುತ್ತೇವೆಂದು ಆಶ್ವಾಸನೆ ಕೊಟ್ಟಿದ್ದರು. ಆ ಬಗ್ಗೆ ಏನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಮಾನ್ಯ ಮಂತ್ರಿಗಳು ಹೇಳಬೇಕು.

ಶ್ರೀ ಪಿಚ್.ಎಂ. ರೇವಣ್ಣ : ಮಾನ್ಯ ಅಧ್ಯಕ್ಷರೇ, ಕೇಂದ್ರದಿಂದ ಮತ್ತು ನಮ್ಮಿಂದ ಎಷ್ಟು ಹಣ ಬಿಡುಗಡೆ ಮಾಡಿದ್ದೇವೆ ಅಂದರೆ ಅದು 520.317 ಲಕ್ಷ ರೂಪಾಯಿಗಳು ಬಿಡುಗಡೆ ಆಗಿದೆ. ಮಾನ್ಯ ಸದಸ್ಯರು ತಾಲ್ಲೂಕುವಾರು ಫಿಗರ್ಸ್ ಬೇಕು ಅಂದರೆ ಇದರಲ್ಲಿ ಮೂರು ಇಲಾಖೆಗಳು ಬರುತ್ತವೆ. ಕೃಷಿ, ತೋಟಗಾರಿಕೆ ಮತ್ತು ಅರಣ್ಯ ಇಲಾಖೆಗಳು. ಜಲಾನಯನ ಪ್ರದೇಶದಲ್ಲಿ ಅಂದರೆ ಆ ಭಾಗದಲ್ಲಿ ತುರುವೇಕೆರೆ ಮತ್ತು ಮೂವತ್ತೂರು. ಆ ಭಾಗದಲ್ಲಿ ಬೆಂಗಳೂರು ಮತ್ತು ತುಮಕೂರು ಎರಡೂ ಸೇರುವುದರಿಂದ ಫಿಗರ್ಸ್ ಕೊಡುವುದಕ್ಕಾಗುವುದಿಲ್ಲ ಎಂದು ನಾನು ತಿಳಿಸಿದ್ದೇನೆ. ಮತ್ತೆ ಅವರು ಏನು ಬಯಲು ಅಭಿವೃದ್ಧಿ ಮಾಡಲಿ ಬಗ್ಗೆ ಕೇಳಿದ್ದಾರೆ ಅದು ಈ ಶಾಸನ ಸಭೆಯಲ್ಲಿ ಬರುತ್ತದೆ. ಆ ಬಗ್ಗೆ ಸರ್ಕಾರ ಕ್ರಮ ತೆಗೆದುಕೊಂಡಿದೆ.

ಅಧ್ಯಕ್ಷರು : ಪ್ರಶ್ನೋತ್ತರ ಮುಗಿಯಿತು.

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು.

ಶ್ರೀ ಹಾರ್ನಹಳ್ಳಿ ರಾಮಸ್ವಾಮಿ (ಕಾನೂನು ಹಾಗೂ ಸಂಸದೀಯ ವ್ಯವಹಾರಗಳ ಸಚಿವರು) : ಮಾನ್ಯ ಅಧ್ಯಕ್ಷರೇ, 25Ë8Ë94ರ ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳ ಒಂದನೇ ಪಟ್ಟಿಯಲ್ಲಿರುವ 19 ಪ್ರಶ್ನೆಗಳ ಪೈಕಿ ಪ್ರಶ್ನೆಗಳ ಸಂಖ್ಯೆ 302, 305, 172, 181 ಮತ್ತು 46 ಪ್ರಶ್ನೆಗಳನ್ನು ಹೊರತು ಪಡಿಸಿ ಉಳಿಸಿ 14 ಚುಕ್ಕೆ ಗುರುತಿಲ್ಲದ ಪ್ರಶ್ನೆಗಳ ಪಟ್ಟಿಯನ್ನು ಸಭೆಯು ಮುಂದೆ ಇಡುತ್ತೇನೆ.

ಗ್ರಾಮ ಸಹಕಾರಿ ಪತ್ತಿನ ಸಂಘಗಳಿಂದ ರೈತರಿಗೆ ಪುನಃ ಸಾಲ ದೊರಕಿಸುವ ಬಗ್ಗೆ

323- ಶ್ರೀ ಬಿ.ಆರ್. ಪಾಟೀಲ್ (ಗದಗ್) : ಮಾನ್ಯ ಸಹಕಾರ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾಲ ಮನ್ನಾ ಲಾಭ ಪಡೆದುಕೊಂಡ ರೈತರಿಗೆ ಗ್ರಾಮ ಸಹಕಾರಿ ಪತ್ತಿನ ಸಂಘಗಳಿಂದ ಸಾಲ ಸಿಗದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಆ) ಪತ್ತಿನ ಸಹಕಾರ ಸಂಘಗಳಲ್ಲಿ ಸಾಲ ಸಿಗದೆ ಇಂತಹ ರೈತರು ಅನಿವಾರ್ಯವಾಗಿ ದೊಡ್ಡ ದರದಲ್ಲಿ ಖಾಸಗಿ ಮೂಲಗಳಿಂದ ತೆಗೆಯಬೇಕಾದ ಪರಿಸ್ಥಿತಿ ನಿರ್ಮಾಣವಾಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಇ) ಈ ವ್ಯವಸ್ಥೆಯಿಂದ ರೈತರನ್ನು ಬಿಡುಗಡೆ ಮಾಡಿದ ಪುನಃ ಸಹಕಾರಿ ಪತ್ತಿನ ಸಂಘದಿಂದ ಸಾಲ ಸಿಗುವ ವ್ಯವಸ್ಥೆ ಮಾಡಲು ಸರ್ಕಾರ ಕೂಡಲೇ ಕ್ರಮ ಕೈಗೊಳ್ಳುವುದೇ?

ಶ್ರೀ ಎನ್. ಹುಚ್ಚಮಾಸ್ತಿಗೌಡ (ಸಹಕಾರ ಸಚಿವರು) :

ಅ) ಬಂದಿದೆ (ಕೆಲವು ಪ್ರಕರಣಗಳಲ್ಲಿ ಮಾತ್ರ).

ಆ) ಬಂದಿಲ್ಲ.

ಇ) ಈ ಬಗ್ಗೆ ಸಂಬಂಧಿಸಿದ ಸಂಸ್ಥೆಗಳಿಗೆ ಆದೇಶ ನೀಡಲಾಗಿದ್ದಾಗ್ಯೂ ಸಾಲ ವಿತರಣೆಯು ಸಾಲ ವಸೂಲಾತಿಯನ್ನು ಅವಲಂಬಿಸಿರುತ್ತದೆ.

ರಾಜ್ಯದಲ್ಲಿ ಎ.ಪಿ.ಎಂ.ಸಿ. ಮಾರ್ಕೆಟ್ ಯಾರ್ಡ್‌ನಲ್ಲಿ ಶ್ರಮಿಕ ಭವನ

304 - ಶ್ರೀ ಶಿವಾನಂದ ಪಿಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಕೃಷಿ ಮಾರುಕಟ್ಟೆ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?